(ಇ) ದ.ಕ. ಜಿಲ್ಲೆಯಲ್ಲಿನ ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆ

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಅನಾಥಾಶ್ರಮಗಳಿಗೆ ಅನುದಾನ ಬಿಡುಗಡೆಯಾಗಿಲ್ಲ. ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ವರ್ಷದ ಕೊನೆಯಲ್ಲಿ ಅನುದಾನ ಬಿಡುಗಡೆ ಮಾಡದಿರುವುದರಿಂದ ತೊಂದರೆಯಾಗಿದೆ. ಆದುದರಿಂದ ತಕ್ಷಣ ಸ್ಪಂದಿಸಬೇಕು, ಈ ಹಣವನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :— ಇದಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಉತ್ತರಿಸಬೇಕು. ಅವರು ಕೌನ್ಸಿಲ್‌ನಲ್ಲಿ ಮೊದಲು ನನಗೆ ಪ್ರಶ್ನೋತ್ತರಕ್ಕೆ ಉತ್ತರಿಸಬೇಕಾಗಿರುವುದರಿಂದ ಅಲ್ಲಿಗೆ ಹೋಗಬೇಕೆಂದು ತಿಳಿಸಿದ್ದಾರೆ. ಅವರು ಬಂದ ಮೇಲೆ ಇದಕ್ಕೆ ಉತ್ತರ ಕೊಡುತ್ತಾರೆ.

(ಈ) ಮಂಗಳೂರು ತಾಲ್ಲೂಕಿನಲ್ಲಿ ಅನಧಿಕೃತ ಮನೆ ಹೊಂದಿದವರಿಗೆ ಹಕ್ಕು ಪತ್ರ ನೀಡುವುದು.

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) :— ಮಾನ್ಯ ಅಧ್ಯಕ್ಷರೆ, ಮಂಗಳೂರು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಬಹಳಷ್ಟು ವರ್ಷಗಳಿಂದ ರೇಷನ್ ಕಾರ್ಡ್ ಇಲ್ಲದಿರುವವರು, ಮನೆ ನಿವೇಶನವಿಲ್ಲದಿರುವವರು, ಮನೆ ನಿವೇಶನವಿದ್ದು ಹಕ್ಕುಪತ್ರವಿಲ್ಲದಿರುವವರು, ಮತ್ತು ಓಟಿನ ಲಿಸ್ಟ್‌ನಲ್ಲಿ ಹೆಸರುಗಳು ಇಲ್ಲದೇ ಇರುವವರು ಇಂಥವರ ಸಂಖ್ಯೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಇದೆ. ನನಗೆ ತಿಳಿದಮಟ್ಟಿಗೆ 50 ಸಾವಿರಕ್ಕೂ ಹೆಚ್ಚಿಗೆ ಮಂಗಳೂರು ತಾಲ್ಲೂಕಿನಲ್ಲಿ ಇದ್ದಾರೆ. ಅನಧಿಕೃತವಾದ ಮನೆ, ನಿವೇಶನ ಇರುವವರಿಗೆ ಇಲ್ಲಿಯವರೆಗೆ ಹಕ್ಕುಪತ್ರ ಕೊಟ್ಟಿಲ್ಲ.

ಅಧ್ಯಕ್ಷರು :— ತಾವು ಯಾವ ಮಂತ್ರಿಯವರಿಗೆ ನೋಟಿಸ್ ಕೊಟ್ಟಿದ್ದೀರಿ.

ಶ್ರೀ ಕೆ. ಜಯರಾಮಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಇದಕ್ಕೆ ಮಾನ್ಯ ಕಂದಾಯ ಮಂತ್ರಿಯವರು ಉತ್ತರ ಕೊಡಬೇಕು ಆಥವಾ ನಮ್ಮ ಜಿಲ್ಲೆಯ ಇಬ್ಬರು ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು :— ನೋಟೀಸ್ ತಲುಪ್ಪಿಲ್ಲವೆಂದರೆ ನಾವು ಹೇಗೆ ಕೆಲಸ ಮಾಡಬೇಕು? ಮೊದಲೇ ಅವರಿಗೆ ನೋಟೀಸ್ ಕಳುಹಿಸುತ್ತೇನೆ, ಬಿಸಿನೆಸ್ ಎಲ್ಲಾ ಆದರಲ್ಲಿ ತೋರಿಸಿರುತ್ತೇನೆ. ಅವರು ಸದನಕ್ಕೆ ಬರುವುದಿಲ್ಲ, ಬೇರೆ ಯಾರಿಗೂ ಅವರ ಕೆಲಸವನ್ನು ಒಪ್ಪಿಸುವುದಿಲ್ಲ. ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ಸಚಿವರು ನನಗೆ ಮೊದಲು ಪ್ರಶ್ನೋತ್ತರ ವೇಳೆ ಎಲ್.ಸಿಯಲ್ಲಿದೆ ಎಂದು ಹೇಳಿ, ಅಲ್ಲಿ ಮುಗಿಸಿಕೊಂಡು ಎರಡು